ಶ್ರೀ ಎಸ್. ಬಂಗಾರಪ್ಪ :– ಈ ಪ್ರಶ್ನೆಯನ್ನು ಸ್ವಲ್ಪ ನಿಧಾನವಾಗಿ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು :– ಈ ಪ್ರಶ್ನೆಯನ್ನು ತಡೆ ಹಿಡಿದಿರುತ್ತೇನೆ. ಆ ಮೇಲೆ ಇನ್ನೊಂದು ಸಾರಿ ತೆಗೆದುಕೊಳ್ಳೋಣ.

ಅಧ್ಯಕ್ಷರು :– ನಿಮ್ಮ ಪ್ರಶ್ನೆ 694ಕ್ಕೆ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ :– ಈ ಪ್ರಶ್ನೆಗೆ ಒಪ್ಪಿಕೊಳ್ಳೋಣ, ಇಡೀ ರಾಜ್ಯದ ಮಾಹಿತಿಯನ್ನು ತರಿಸ ಬೇಕಾಗುತ್ತದೆ. ಆದರೆ ಕೆಲವು ಸರಳ ಪ್ರಶ್ನೆಗಳಿಗೆ.....

ಅಧ್ಯಕ್ಷರು :– ಈಗ ಇದಕ್ಕೆ ಸೀಮಿತ ಮಾಡಿಕೊಳ್ಳೋಣ. ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆ.

ವಿಷಯ :– ಕೆ. ಆರ್. ಎಸ್. ಅಚ್ಚುಕಟ್ಟಿನ ವಿ. ಸಿ. ನಾಲೆಯ ಆಧುನೀಕರಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 214 (852)

ಶ್ರೀ ಎನ್. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ. ಆರ್. ಎಸ್. ಅಚ್ಚುಕಟ್ಟು ಪ್ರದೇಶದಲ್ಲಿರುವ ವಿಶ್ವೇಶ್ವರಯ್ಯ ನಾಲಾ (ವಿ. ಸಿ. ನಾಲಾ) ಆಧುನೀಕರಣ ಕಾಮಗಾರಿ ಕೆಲಸವನ್ನು ಮತ್ತು ಸಂಪರ್ಕ ನಾಲಾ ಕಾಮಗಾರಿ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗಿದೆ ?

ಆ) ಈ ಕಾಮಗಾರಿ ಕಾರ್ಯಗಳು ಪ್ರಸ್ತುತ ಯಾವ ಹಂತದಲ್ಲಿದೆ ?

ಇ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾರ್ಯವು ಯೋಜನೆಯಲ್ಲಿ ಒಳಗೊಂಡ ಕೆಲಸ ವಾಗಿದೆಯೇ (ಪ್ಲಾನ್ಡ್ ಪ್ರೋಗ್ರಾಮ್)

ಈ) ವಿ. ಸಿ. ನಾಲಾ ಆಧುನೀಕರಣ ಕಾರ್ಯ ವರುಣಾ ನಾಲಾ (ದೇವರಾಜು ಅರಸು ನಾಲಾ) ಕಾರ್ಯ ಪ್ರಾರಂಭಗೊಂಡ ದಿನದಿಂದ ಈ ವರ್ಷದ ವರೆಗೆ ಪ್ರತಿ ಆರ್ಥಿಕ ವರ್ಷದಲ್ಲಿ ಎಷ್ಟೆಷು ಹಣ ಖರ್ಚು ಮಾಡಲಾಗಿದೆ ಹಾಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಪ್ರತ್ಯೇಕ ವಿವರಗಳೊಡನೆ)

ಉ) ಮಂಡ್ಯ ಜಿಲ್ಲೆಯಲ್ಲಿ ವರುಣಾ ನಾಲಾ ವಿರೋಧಿ ಚಳುವಳಿ ಅಂತ್ಯಗೊಂಡಾಗ ಮಂಡ್ಯ ಜಿಲ್ಲೆಯ ರೈತರು ಹಾಗೂ ಸರ್ಕಾರದ ಮಧ್ಯ ಆದ ಒಪ್ಪಂದಗಳ ಅನ್ವಯ ಸರ್ಕಾರಿ ಆಜ್ಞೆ ಆಗಿದೆಯೇ ?

ಊ) ಹಾಗಿದ್ದಲ್ಲಿ, ಅದರ ವಿವರಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) 1979–80.

ಆ) ಈಗಿರುವ ಕಾಲುವೆಯ ಒಳ ಆವರಣ ಹಾಗೂ ಲೈನಿಂಗ್‌ಅನ್ನು ಭದ್ರಗೊಳಿಸುವ ಕೆಲಸ 37 ಕಿ. ಮೀ. ವರೆಗೆ ಪೂರ್ಣಗೊಳ್ಳುತ್ತಿದೆ. ಹಾಗೂ ಲಿಂಕ್ ಕಾಲುವೆಯು 13 ಕಿ. ಮೀ. ವರೆಗೆ ಕಾರ್ಯ ಮುಂದು ವರೆದಿದೆ.

ಇ) ಹೌದು.

ಈ) ಲಗತ್ತಿಸಿರುವ ಅನುಬಂಧ–(1) ರಲ್ಲಿ ಸೂಚಿಸಲಾಗಿದೆ.

ಉ) ಹೌದು.

ಊ) ದಯವಿಟ್ಟು ಅನುಬಂಧ (2) ನ್ನು ನೋಡಿ.

ANNEXURE - I

YEARWISE GRANT AND EXPENDITURE UNDER VISVESWARAYYA AND VARUNA CANALS

(Rs. lakhs)

Sl. No.	Year	Modernisation Visveswarayya Canals		Varuna Canal	
		Grant	Expenditure	Grant	Expenditure
1	2	3	4	5	6
1	1978–79	—	—	20.00	0.35
2	1979–80	—	35.48	40.00	95.96
3	1980–81	50.00	26.30	80.00	96.47
4	1981–82	40.00	32.28	80.00	110.19
5	1982–83	30.00	68.86	200.00	134.10
6	1983–84	200.00	159.20	220.00	179.85
7	1984–85	300.00	259.29	300.00	217.91
8	1985 86	2 0.00	219.26	250.00	285 95
9	1986-87	250.00	249 05	250.00	344.13
10	1987–88	500.00	278 33	500.00	281 83
11	1988-89	500.00	243.64	355 00	249.41
12	1989-90	385.00	339.16	500.00	290'61
13	1990–91	100.00	184.46 (upto Oct. 1990)	500.00	246.75 (upto Oct. 1990)
		TOTAL :-	2095.31		2533.51

ANNEXURE-2

Understanding reached regarding Varuna Canal and Visveswarayya Canal

Canal Modernisation.

As per the Government Order No. PWD 7 MKS 69, dt. 27th March 1979, issued after the agreement reached between some of the Legislators and other important personalities of Mandya district and the Commitee constituted to safeguard the interests of the farmers of Visveswarayya Canal as wellas the concerned officers of the State Government, the following directions have been issued by the Government :

a) The Varuna Canal shall be constructed as a right bank canal of Krishnaraja sagar.

b) It shall irrigate 80,000 acres of semi-dry crops in the final phase.

c) The lands which have been getting water for the several years regularly from the Visvaswaraya Canal, the tanks and pickups it feeds and the Shimsha Anecut Channels aggregating to 60,000 acres of land under Sugar Cane and 1,31,000 acres of land under paddy shall constitute the area under item (iv) of Section 27 of the Karnataka Irrigation Act.

d) Since the widening of the Hulikere tunnel to provide sufficient discharge to the ayacut accepted under the Viveswaraya and Shimsha anecut channels necessitates the closure of the canal for nearly one year, causing considerable loss of crops of crops but since a sufficient discharge for the Visveswaraya canal ayacut has to be provided, a new channel and tunnel shall be constructed to supplement the discharge through the Hulikere tunnel. Adequate funds for this purpose shall be provided during 1979–80 and thereafter.

e) The required staff shall be sanctioned and the work on both the Varuna Cana and the Modernisation of the Visvesvaraya Canal, shall be started at the same time

f) Action will be taken to set up a special Committee by Statute and this Committee will be entrusted with the responsibility of ansuring the optimum and equitable use of the Cauvery Waters within the State keeping in mind the requirement of the existing atchkat.

ಶ್ರೀ ಎಂ ಎಸ್. ಆತ್ಮಾನಂದ :– ತಮ್ಮ ಉತ್ತರದಲ್ಲಿ ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾರ್ಯವು ಪ್ಲಾನ್ಡ್ ಪ್ರೋಗ್ರಾಮಿನಲ್ಲಿ ಒಳಗೊಂಡಿದೆ ಎಂದು ತಿಳಿಸಿದ್ದೀರಿ. ಈ ಯೋಜನೆ 78–79 ರಲ್ಲಿ ಪ್ರಾರಂಭವಾಗಿ 13 ವರ್ಷವಾಗಿದೆ. ಅದೇ ರೀತಿ ವರುಣಾ ನಾಲೆ ಯೋಜನೆ ಕೂಡ ಪ್ರಾರಂಭವಾಗಿ 13 ವರ್ಷವಾಗಿದೆ. ಆದರೆ ಆ ವರುಣಾ ನಾಲೆ ಯೋಜನೆ ಯೋಜನೇತರ ಕಾರ್ಯಕ್ರಮವಾಗಿದೆ. ಈ ಎರಡು ಯೋಜನೆಗಳಿಗೆ ಹಣ ಬಿಡುಗಡೆ ಮಾಡುವುದರಲ್ಲಿ ಬಹಳ ತಾರತಮ್ಯ ಇದೆ. ಸುಮಾರು 5 ಕೋಟಿ ರೂಪಾಯಿಗಳಷ್ಟು ಕಡಿಮೆ ಹಣವನ್ನು ಈ ಆಧುನೀಕರಣ ಕಾರ್ಯಕ್ಕೆ ಬಿಡುಗಡೆ ಮಾಡಿದ್ದೀರಿ. 1990–91 ರಲ್ಲಿ ಒಂದು ಕೋಟಿ ರೂಪಾಯಿ ಮಾತ್ರ ಈ ಆಧುನೀಕರಣ ಯೋಜನೆಗೆ ಬಿಡುಗಡೆ ಮಾಡಿದ್ದರೆ ವರುಣಾ ನಾಲಾ ಯೋಜನೆಗೆ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆಧುನೀಕರಣ ಯೋಜನೆ ಆದರೆ ಈ ನಾಲಾ ಪ್ರದೇಶದ ಕೊನೆಯ ರೈತರಿಗೆ ನೀರು ಒದಗಿಸತಕ್ಕ ಪರಿಹಾರ ಯೋಜನೆ. ಈ ಯೋಜನೆ ಕುಂಠಿತವಾಗುವುದಕ್ಕೆ ಕಾರಣ ವೇನು ? ಹಣ ಬಿಡುಗಡೆ ಮಾಡುವುದರಲ್ಲಿ ತಾರತಮ್ಯ ಆಗಿಲ್ಲವೆ ? ಈ ತಾರತಮ್ಯವನ್ನು ಯಾವ ರೀತಿ ಸರಿಪಡಿಸುತ್ತೀರೆಂದು ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸುತ್ತೇನೆ. ಜೊತೆಗೆ ಈ ವರುಣಾ ನಾಲೆ ವಿರೋಧಿ ಚಳುವಳಿ.....

ಅಧ್ಯಕ್ಷರು :– ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೆ, ಈ ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣದ ಪ್ರಶ್ನೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕ ಪ್ರಶ್ನೆ. ಅದಕ್ಕೆ ಹಣವನ್ನು ಜಾಸ್ತಿ ಕೊಡಬೇಕು ಎಂಬ ಮಾತು ಹತ್ತಾರುಸಾರಿ ಈ ಸದನದಲ್ಲಿ ಬಂದಿರತಕ್ಕ ವಿಚಾರ. ಸರ್ಕಾರ ಕೂಡ ಪದೇ ಪದೇ ಹೇಳಿಕೆ ಕೂಡ ಕೊಟ್ಟಿದೆ. ಹೆಚ್ಚಿನ ಹಣವನ್ನು ಈ ಕೆನಾಲ್ ದುರಸ್ತೀಕರಣಕ್ಕೆ ನಾವು ಒದಗಿಸಬೇಕು ಎಂದು ಹೇಳಿದ್ದಾರೆ.ಎಷ್ಟು ಕೊಟ್ಟಿದ್ದೇವೆ ಎಂಬ ಬಗ್ಗೆ ಈಗಾಗಲೇ ದೊಡ್ಡ ಪಟ್ಟಿ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹತ್ತಿರ ಇದು ಇದೆ ಎಂದು ನಾನು ಭಾವಿಸಿದ್ದೇನೆ. 1990–91 ರಲ್ಲಿ 5 ಕೋಟಿ ರೂಪಾಯಿಗಳ ಹಣ ಇಟ್ಟು ಅಕ್ಟೋಬರ್ 1990 ರ ವರೆಗೆ 246.75 ಲಕ್ಷ ರೂಪಾಯಿ ಖರ್ಚಾಗಿದೆ. ಉಳಿದಿರತಕ್ಕ ಹಣವನ್ನು ಕೂಡ ಖರ್ಚು ಮಾಡಬೇಕು. ಹಣ ಕಡಿಮೆ ಬಿದ್ದರೆ ಆ ಹಣವನ್ನು ಕೂಡ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಇನ್ನು ವರುಣಾ ನಾಲೆ ವಿಚಾರದಲ್ಲಿ ಕೂಡ ಹಣ ಸಾಲದು ಎಂಬ ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಏಕೆಂದರೆ ವರುಣಾ ಮತ್ತು ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣ ಎರಡೂ ಕೂಡಿ ಜೊತೆಗೆ ಹೋಗಬೇಕು. ಹಣವನ್ನು ಕೂಡ ನಾವು ಜಾಸ್ತಿ ತೆಗೆದಿಟ್ಟು ಕೆಲಸ ಮಾಡಿಸುವ ಕೆಲಸವನ್ನು ಕೂಡ ನಾವು ಮಾಡುತ್ತೇವೆ. 500 ಲಕ್ಷ ರೂಪಾಯಿಗಳದ್ದು ಹೇಳಿದ್ದು ವರುಣಾ ನಾಲೆಯದು. ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣದ್ದು ಅಕ್ಟೋಬರ್ 1990ರ ವರೆಗೆ 184.46 ಲಕ್ಷ ರೂಪಾಯಿ ಖರ್ಚಾಗಿದೆ. ಹಣವನು ಮುಂದೆಯೂ ಕೂಡ ಒದಗಿಸುತ್ತಾ ಹೋಗುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ :– ವರುಣಾ ನಾಲೆ ವಿರೋಧಿ ಚಳುವಳಿ ಅಂತ್ಯಗೊಂಡಾಗ ಮಂಡ್ಯಜಿಲ್ಲೆ ರೈತ ಮುಖಂಡರು ಮತ್ತು ಸರ್ಕಾರದ ನಡುವೆ ಆದಂಥ ಒಪ್ಪಂದದ ಪ್ರಕಾರ ಸರ್ಕಾರಿ ಆಜ್ಞೆಯಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ನೀರು ಬೇಕು ಎಂದು ಸೂಪರ್‌ವಿಷನ್ ಮಾಡುವುದಕ್ಕೆ ಕಮಿಟಿ ರಚಿಸಬೇಕು ಎಂದು ಆ ಸಮಯದಲ್ಲಿ ಆಗಿತ್ತು. ಸರ್ಕಾರಿ ಆಜ್ಞೆಯಲ್ಲಿ ಕೂಡ ಅದನ್ನು ನಮೂದಿಸಿದೆ. ಆದರೆ ಅದು ಇದುವರೆಗೂ ಆಗಿಲ್ಲ. ಆಗದೇ ಇರುವುದಕ್ಕೆ ಕಾರಣ ಕೇಳುತ್ತೇನೆ. ಆ ಸಮಿತಿಯನ್ನು ಶೀಘ್ರವಾಗಿ ರಚಿಸಬೇಕು ಎಂದು ಕೇಳುವುದರೊಟ್ಟಿಗೆ ಐದಾರು ಕೋಟಿ ರೂಪಾಯಿಗಳಷ್ಟು ಅನುದಾನ ಕೊಡುವುದರಲ್ಲಿ ತಾರತಮ್ಯ ಏನಾಗಿತ್ತು ಅದನ್ನು ಮುಂದಿನ ಆರ್ಥಿಕ ವರ್ಷದಲ್ಲಾದರೂ ಬಿಡುಗಡೆ ಮಾಡಿ ಈ ಕಾರ್ಯವನ್ನು ಶೀಘ್ರವಾಗಿ ಮಾಡಿಕೊಡುತ್ತಾರೆಯೇ ? ಮೂರು ತಿಂಗಳು ಮಾತ್ರ ಈ ಆರ್ಥಿಕ ವರ್ಷದಲ್ಲಿ ಉಳಿದಿದೆ. ಒಂದು ಕೋಟಿ ರೂಪಾಯಿ ಕೊಟ್ಟಿರತಕ್ಕ ಅನುದಾನ ಸಂಬಳದ ವೆಚ್ಚಕ್ಕೇ ಆಗಿರುವುದರಿಂದ ಹಿಂದೆ ಲೋಕೋಪಯೋಗಿ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಪ್ಲಾನ್ ಪ್ರೋಗ್ರಾಂ ಆದರೂ ಅದಕ್ಕೆ ಹಣ ಸಾಲುವುದಿಲ್ಲ. ನೀವು ಪುನಃ ಹಣ ಬಿಡುಗಡೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಹೇಳಿದ್ದೇನೆ, ಹಣ ಕೊಟ್ಟಿರತಕ್ಕದ್ದು ಕಡಿಮೆ ಎಂಬುದನ್ನು ಒಪ್ಪುತ್ತೇನೆ. ಹಣ ಜಾಸ್ತಿ ಕೊಡತಕ್ಕ ಅವಶ್ಯಕತೆ ಇದೆ ಎಂಬ ಮಾನ್ಯ ಸದಸ್ಯರ ಮಾತನ್ನು ಸಂಪೂರ್ಣವಾಗಿ ನಾನು ಅನುಮೋದಿಸುತ್ತೇನೆ. ಜಾಸ್ತಿ ಹಣ ಕೊಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ. ಸಮಿತಿ ವಿಚಾರದಲ್ಲಿ ತಾವು ಏನು ಹೇಳಿದ್ದೀರಿ ಅದು ಹಿಂದೆ ಆಗಿರತಕ್ಕ ಮಾತುಕತೆ ಮತ್ತು ಒಪ್ಪಂದದ ಪ್ರಕಾರ ಇದೆ. ಅದು ಏತಕ್ಕೆ ತಡವಾಗಿದೆ ಎಂಬ ಕಾರಣ ಹುಡುಕುವುದಕ್ಕೆ ಸಾಧ್ಯವಾಗಿಲ್ಲ. ಒಪ್ಪಂದದ ಪ್ರಕಾರ ಮತ್ತು ಸರ್ಕಾರಿ ಆಜ್ಞೆಯಲ್ಲಿ ಬಂದಿರುವುದರಿಂದ ಕೂಡಲೇ ರಚನೆ ಮಾಡುವ ವಿಚಾರಕ್ಕೆ ನಾನು ಗಮನ ಹರಿಸುತ್ತೇನೆ.

ಶ್ರೀ ಹರ್ಷಕುಮಾರ್ ಗೌಡ :– ಅನಕ್ಷರೆ, ವರುಣಾ ನಾಲೆ ಬಗ್ಗೆಯೂ ಕೂಡ ಕೆಲಸ ಆಗುತ್ತಿದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಮೈಸೂರು ನಗರದಿಂದ ನಾನು ಬಂದಾಗ ಪ್ರತಿನಿತ್ಯ ಅಲ್ಲಿ ಚಳುವಳಿ ನಡೆಯುತ್ತಿದೆ. ವರುಣಾ ನಾಲೆ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಮೈಸೂರು ಜಿಲ್ಲೆಯ ರೈತರ ಹಿತದೃಷ್ಟಿಯಿಂದ ವರುಣಾ ನಾಲೆ ಕೆಲಸ ತುರ್ತಾಗಿ ಆಗಬೇಕು. ಯಾವುದೋ ಒಂದು ಸ್ಟೋಟಕ ವಸ್ತುವಿನ ಸಿಡಿತದಿಂದ ಕೆ.ಆರ್.ಎಸ್.ಗೆ ತೊಂದರೆಯಾಗುತ್ತದೆ ಎಂದು ಅದನ್ನು ತಡೆಹಿಡಿದಿದ್ದಾರಂತೆ ವರುಣಾ ನಾಲೆ ಕೆಲಸ ಸ್ಥಗಿತವಾಗಿದೆ ಎಂದು ಸಾರ್ವಜನಿಕರಲ್ಲಿ ಸಂಶಯ ಮೂಡಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ವರುಣಾ ನಾಲೆ ಕಾರ್ಯವನ್ನು ಆದ್ಯತೆ ಆಧಾರದ ಮೇಲೆ ತೆಗೆದುಕೊಳ್ಳಬೇಕು. ವಿಶ್ವೇಶ್ವರಯ್ಯ ನಾಲೆ ಅಭಿವೃದ್ಧಿ ಕಾರ್ಯದ ಜೊತೆಗೇ ವರುಣಾ ನಾಲೆ ಕೆಲಸವನೂ ತ್ವರಿತಗತಿಯಿಂದ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ಭಿನ್ನ ಭಾವವನ್ನು ಯಾರೂ ಕೂಡ ತೋರಿಸಿಲ್ಲ. ಇತ್ತೀಚೆಗೆ ಮೇಲ್ಮನೆಯಲ್ಲಿ ಕೂಡ ವಿಚಾರ ಪ್ರಸ್ತಾಪಕ್ಕೆ ಬಂದಿದ್ದು ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣ ಪ್ರಶ್ನೆ ಬಂದಾಗ ಅದನ್ನು ಮಾಡಬೇಕು, ಹಣವನ್ನು ಜಾಸ್ತಿ ಕೊಡಬೇಕು ಎಂಬ ಒತ್ತಡದ ಜೊತೆಗೆ ವರುಣಾ ನಾಲೆ ಮಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ.

11–40 ಎ. ಎಂ.

ಏಕೆಂದರೆ ಆಗಿರತಕ್ಕ ಒಪ್ಪಂದಗಳು ಮಾತುಕತೆಗಳ ಹಿನ್ನೆಲೆ ಕುರಿತು ಮಾನ ಸದಸ್ಯರು ತಮ್ಮ ಕಳಕಳಿಯನ್ನು ವ್ಯಕ್ತಮಾಡಿದ್ದಾರೆ. ಡಾಮ್ ಸಮೀಪದಲ್ಲಿ ಕೆನಾಲ್‌ಗೆ ಕಲ್ಲು ತೆಗೆಯಲು ಸ್ಫೋಟಕ ಇಟ್ಟು ಸಿಡಿಸುತ್ತಿದ್ದುದರ ಬಗ್ಗೆ ಏನಾದರೂ ಇದರಿಂದ ತೊಂದರೆ ಆದೀತು ಎಂದು ಅನುಮಾನ ಪಡುವುದು ಸಹಜ. ಆದರೆ ಈ ಬಗ್ಗೆ ತಜ್ಞರು, ಎಂಜಿನಿಯರುಗಳು ಈಗಾಗಲೇ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಅದನ್ನು ತರಿಸಿ ನೋಡೋಣ. 4 ದಿನ ಕೆಲಸ ಮುಂದಕ್ಕೆ ಹೋದರೆ ತೊಂದರೆ ಇಲ್ಲ ಎಂದು ತಡೆಹಿಡಿಯಲಾಗಿದೆ. ತಜ್ಞರು ಅಭಿಪ್ರಾಯವನ್ನು ಮತ್ತೊಮ್ಮೆ ನೋಡಿ ಅನಂತರ ತೀರ್ಮಾನ ಮಾಡುತ್ತೇವೆಂದು ನಿಲ್ಲಿಸಿದ್ದೇವೆಯೇ ವಿನಹ ಮತ್ತೆ ಯಾವುದಕ್ಕೂ ಅಲ್ಲ. ಹಣದ ಬಗ್ಗೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣಕ್ಕೂ ಹಣ ಕೊಡಬೇಕಾಗುತ್ತದೆ. ಎರಡಕ್ಕೂ ನಾವು ಹಣವನ್ನು ಒದಗಿಸಿಕೊಡುತ್ತೇವೆ.

ಶ್ರೀಮತಿ ಡಿ. ಚಂದ್ರಪ್ರಭಾ ಅರಸ್ :– ಈ ಭಾಗದ ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ ವರುಣಾ ನಾಲೆಯನ್ನು ನಿರ್ಮಾಣ ಮಾಡಬೇಕೆಂಬುದು ವಿಶ್ವೇಶ್ವರಯ್ಯನವರ ಕಾಲದಲ್ಲೇ ಆದ ಒಂದು ಯೋಜನೆ

ಇದನ್ನು ಕಾರ್ಯಗತ ಮಾಡುವಾಗ ಒಂದಷ್ಟು ಒಂದು ರೀತಿಯಲ್ಲಿ ಮುಂದೆ ಹೋಗಿದೆ. ಆಣೆಕಟ್ಟಿಗೆ ಸಿಡಿಮದ್ದಿನಿಂದ ತೊಂದರೆಯಾಗಬಹುದೆನ್ನುವುದು ನಮ್ಮ ಅಭಿಪ್ರಾಯವಾಗಿದೆ. ಈ ಬಗ್ಗೆ ತಜ್ಞರು ಮತ್ತು ಎಂಜಿನಿಯರ್‌ಗಳು ಸ್ಪಾಟ್‌ಗೆ ಹೋಗಿ ಸೂಪರ್ ವೈಸಿಂಗ್ ಮಾಡತಕ್ಕ ಕೆಲಸ ಇತ್ತೀಚಿನ ದಿವಸಗಳಲ್ಲಿ ಕಾಣುತ್ತಿಲ್ಲ. ಇದು ಮುಂದೆ ಆಗಬಾರದು. ಟೆಕ್ನಿಕಲ್ ರಿಪೋರ್ಟ್‌ನ್ನು ಸಬಾರ್ಡಿನೇಟ್ಸ್, ಜ್ಯೂನಿಯರ್ಸ್ ತಯಾರು ಮಾಡುತ್ತಾರೆ. ಕಂಟ್ರಾಕ್ಟರು ಹೇಳಿದ ಪ್ರಕಾರ ರಿಪೋರ್ಟ್ ತಯಾರು ಆಗುತ್ತದೆ. ಆಣೆಕಟ್ಟಿಗೆ ಧಕ್ಕೆಯಾಗಬಾರದು. ಇವತ್ತು ನೀರಾವರಿ ಕೆಲಸಕಾರ್ಯಗಳು ಸ್ಥಗಿತವಾಗಿವೆ. ಇಲ್ಲಿ ಟೆಮ್‌ಬಾಂಡ್ ಪ್ರೋಗ್ರಾಮ್ ಆಗುತ್ತಾ ಇಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ ವಿಶ್ವೇಶ್ವರಯ್ಯ ಹಾಗೂ ವರುಣಾ ನಾಲೆಯ ಭಾಗದಲ್ಲಿ ಬರತಕ್ಕ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಹಿಂದೆ 2 ಕೋಟಿ ಹಣ ಬಿಡುಗಡೆ ಮಾಡಿದರೆ ಅದರಲ್ಲಿ 1 ಕೋಟಿ ಚಿಲ್ಲರೆ ಹಣ ಬರೀ ಎಸ್ಟಾಬ್ಲಿಷ್‌ಮೆಂಟ್‌ಗೇ ಖರ್ಚು ಆಗುತ್ತಾ ಇತ್ತೇ ವಿನಃ ಪ್ರೋಗ್ರೆಸ್ ಏನೂ ಆಗುತ್ತಾ ಇರಲಿಲ್ಲ. ಈ ಬಗ್ಗೆ ಎರಡೂ ವಿಭಾಗದ ತಜ್ಞರು ಮತ್ತು ಹಿರಿಯ ಅಧಿಕಾರಿಗಳು, ಸಾಧ್ಯವಾದರೆ ಶಾಸಕರನ್ನೂ ಕರೆಯಿಸಿ ಹೆಚ್ಚು ಜಾಗ್ರತೆ ವಹಿಸಿ ಕಾರ್ಯ ಮುಂದುವರೆಯುವ ರೀತಿಯಲ್ಲಿ ಆಣೆಕಟ್ಟಿಗೆ ಧಕ್ಕೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರ ಸಂಪೂರ್ಣವಾಗಿ ಅರ್ಥಮಾಡಿಕೊಂಡಿದೆ. ಮಾನ್ಯ ದೇವರಾಜ್ ಅರಸ್‌ರವರ ಕಾಲದಿಂದಲೂ ನಡೆದುಬಂದಿರತಕ್ಕ ಕಾರ್ಯಕ್ರಮ ಇದ ಈ ಬಗ್ಗೆ ನಾನು ಏವರಕ್ಕೆ ಹೋಗುವುದಿಲ್ಲ. ಇದು ನಮ್ಮ ಯೋಜನೆ, ನಮ್ಮ ನೀರು ಇದೆ. ಆದಷ್ಟು ಶೀಘ್ರವಾಗಿ ಇದನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ನಾವು ಹಣವನ್ನು ಜಾಸ್ತಿ ಒದಗಿಸದೇ ಇದ್ದರೆ ಇದು ಆಗುವುದಿಲ್ಲ. ಮತ್ತೆ ಮಾನ್ಯ ಸದಸ್ಯರು ಕೊಡುವ ಹಣದಲ್ಲೇ 1 ಕೋಟಿ ಎಸ್ಟಾಬ್ಲಿಷ್‌ಮೆಂಟ್‌ಗೆ ಕೊಟ್ಟರೆ ಕೆಲಸ ಹೇಗೆ ಆಗುತ್ತದೆ ಎನ್ನುವ ಸಹಜವಾದ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಅದಕ್ಕಾಗಿಯೇ ನಾವು ಈ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ಹಣವನ್ನು ಜಾಸ್ತಿ ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೇವೆ. ಇದಕ್ಕೆ ಹಣ ಒದಗಿಸುವುದರ ಜೊತೆಗೇ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣಕ್ಕೂ ಹಣವನ್ನು ಒದಗಿಸಬೇಕೆಂದು ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಹೇಳಿದ್ದಾರೆ. ಅದು ಬಹಳ ಒಳ್ಳೆಯ ಸಲಹೆ. ಹಣವನ್ನು ಒದಗಿಸುವುದರ ಬಗ್ಗೆ ಆತ್ಮಾನಂದರವರಿಗೆ ಉತ್ತರ ಕೊಟ್ಟಿದ್ದೇನೆ. ಅದಕ್ಕೆ ಕೂಡಾ ಹಣವನ್ನು ಜಾಸ್ತಿ ಒದಗಿಸಿಕೊಡುತ್ತೇನೆ.

Smt. Damayanthi Bore Gouda :– Who are the officers responsible for supervising this blasting work; whether there is any deviation from the original project; and do you know that blasting work is being done even during night which is against the Explosives Act ?

Sri. S. Bangarappa :– Blasting work has been stopped there whether it is day or night. Secondly, supervision is made by the concerned engineers. There are certain guidelines. The areas, here the main dam, which come under those engineers.

ಶ್ರೀ ಡಿ. ಬಿ. ಚಂದ್ರೇಗೌಡ :– ವರುಣಾ ಮತ್ತು ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಒಂದಕ್ಕೊಂದು ಪೂರಕ ಸುತ್ತು ಪ್ರೇರಕ. ಆಧುನೀಕರಣ ಮಾಡುತ್ತೇವೆ. ಏನ್ನುವ ಆಶ್ವಾಸನೆಯ ಮೇಲೆಯೇ ವರುಣಾ ನಾಲೆಗೆ ಮಂಡ್ಯ ಜಿಲ್ಲೆಯ ರೈತರು ಒಪ್ಪಿಗೆ ಕೊಟ್ಟಿದ್ದುದು ಈಗ ಇಲ್ಲಿ ಕೊಟ್ಟಿರತಕ್ಕಂತಹ ಹಣ ಮತ್ತು ಖರ್ಚಾಗಿರತಕ್ಕಂಥಹ ಹಣವನ್ನು ನೋಡಿದರೆ ಮಂಜೂರಾದ ಹಣವೂ ಕೂಡ ಖರ್ಚಾಗಿಲ್ಲವೆಂದು ಗೊತ್ತಾಗುತ್ತದೆ. ಇನ್ನೂ ಹೆಚ್ಚು ಹಣ ಕೊಡುತ್ತೇವೆಂದು ಹೇಳುತ್ತಾರೆ. ಮಂಜೂರಾದ ಹಣವೇ ಖರ್ಚಾಗದೇ ಇರುವಂತಹ ಸ್ಥಿತಿಗೆ ಆಡಳಿತ ವ್ಯವಸ್ಥೆಯಲ್ಲಿ ದೋಷವೇನಾದರೂ ಇದೆಯೋ ? ಇದರೆ ಅದನ್ನು, ಸರಿಪಡಿಸತಕ್ಕಂತಹ ಪ್ರಯತ್ನವನ್ನು ಏನಾದರೂ ಮಾಡಿದ್ದೀರಾ ? ಈ ಯೋಜನೆಗೆ ಮೂಲ ಅಂದಾಜು ಹಣ ಎಷ್ಟು ? ಅಂದರೆ ಎಸ್ಟಿಮೇಟೆಡ್ ಕಾಸ್ಟ್ ಎಷ್ಟು ? ಈ ಎರಡೂ ಯೋಜನೆಗೆ ಅಂದಾಜು ಮಾಡಿದ ಮೂಲ ಎಸ್ಟಿಮೇಟೆಡ್ ಕಾಸ್ಟ್ ಎಷ್ಟು ? ಮತ್ತು ಇದು ಮರು ಪರಿಶೀಲನೆಯಾಗಿ ಎಷ್ಟಾಗಿದೆ ಎಂಬುದನ್ನು ತಿಳಿಸಬೇಕು. ಮತ್ತೊಂದು ಮುಖ್ಯವಾದ ವಿಚಾರವನ್ನು ಇಲ್ಲಿ ಹೇಳಬೇಕಾಗುತ್ತದೆ. ಕೃಷ್ಣರಾಜ ಸಾಗರ ಆಣೆಕಟ್ಟನ್ನು ಕಟ್ಟುವಾಗಲೇ 80 ಆಡಿ ಎತ್ತರದಲ್ಲಿ ಕ್ರಸ್ಟ್ ಗೇಟನ್ನು ಇಟ್ಟಿದ್ದಾರೆ. ವರುಣಾ ನಾಲೆಗೆ ಹೋಗತಕ್ಕಂತಹ ನೀರು ಒಟ್ಟು 1200 ಕ್ಯೂಸೆಕ್ಸ್, ಎಂದು ನಾನು ತಿಳಿದುಕೊಂಡಿದ್ದೇನೆ. ಹಳೆಯ ಗೇಟಿನಲ್ಲಿ 1100 ಕ್ಯೂಸೆಕ್ಸ್, ನೀರನ್ನು ಬಿಡಬಹುದೆಂದು ಹಿಂದೆ ಆಲೋಚನೆ ನಡೆದಿತ್ತು. ಆದುದರಿಂದ ಅಲ್ಲಿ ಹೊಸದಾಗಿ ಈ ಒಂದು ಆಣೆಕಟ್ಟಿಗೆ ತೊಂದರೆಯಾಗುವ ಹಾಗೆ ಒಡೆಯತಕ್ಕಂತಹ ಈ ಒಂದು ಕಾರ್ಯಕ್ರಮವನ್ನು ನಿಲ್ಲಿಸಬೇಕೆಂಬ ಆಲೋಚನೆ ಆ ಸಂದರ್ಭದಲ್ಲಿ ಆಗಿತ್ತು. ಈಗ ಇರತಕ್ಕಂತಹ ಗೇಟನ್ನು ಬಳಕೆ ಮಾಡಿಕೊಂಡು ಕೆಲಸವನ್ನು ನಿರ್ವಹಣೆ ಮಾಡಬಹುದು.

ಈಗ ಇರತಕ್ಕಂತಹ ಗೇಟಿನಲ್ಲಿ 1100 ಕ್ಯೂಸೆಕ್ಸ್ ನೀರು ಹೋಗತಕ್ಕಂತಹ ಕೆಪಾಸಿಟಿ ಇದೆ. ಈಗ ಏನು ಕೆಪಾಸಿಟಿ ಇದೆ ಅದರ ಮೂಲಕವೇ ವರುಣಾ ನಾಲೆಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುವುದಾದರೆ ಕೃಷ್ಣರಾಜ ಸಾಗರ ಡ್ಯಾಮನ್ನು ಉಳಿಸಬೇಕೆನ್ನುವ ದೃಷ್ಟಿಯಿಂದ ಮತ್ತು ಜನರ ಮನಸ್ಸಿನಲ್ಲಿರುವ ಶಂಕೆಯನ್ನು ಹೋಗಲಾಡಿಸುವದಕ್ಕೋಸ್ಕರ ಅದನು ನಿಲ್ಲಿಸಿ ಇಲ್ಲಿ ನೀರು ಹೋಗುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ :– ಇವೆರಡೂ ಪೂರಕ ಮತ್ತು ಪ್ರೇರಕ ಎಂಬ ಮಾತನ್ನು ವಿರೋಧ ಪಕ್ಷದ ನಾಯಕರು ಆಡಿದ್ದಾರೆ ಅವರ ಅಭಿಪ್ರಾಯವನ್ನು ನಾನೂ ಕೂಡ ಒಪ್ಪುತ್ತೇನೆ. ಆದಕ್ಕೋಸ್ಕರವೇ ಈ ವಿಚಾರ ಆ ಕಾಲದಲ್ಲಿ ಚರ್ಚೆಗೆ ಬಂದಾಗ ಎರಡನ್ನೂ ಕೂಡ ಮಾಡ್ರನೈಸೇಷನ್ ಮಾಡಬೇಕು, ವರುಣಾ ಕೆನಾಲ್ ಅನ್ನು ತೆಗೆದುಕೊಳ್ಳಬೇಕೆಂಬ ಒಪ್ಪಂದ ಆ ಸಂದರ್ಭದಲ್ಲಿಯಾಗಿದೆ. Original cost for this modernisation of the Visveswarayya Canal, of course, that has been included under the plan Sector The estimated cost is Rs. 67 crores. Work has been started in 1979–80. ಆಗಲೇ ಮಾಡಿರತಕ್ಕಂಥಾದ್ದು ಆದು. ಇದರ ಬಗ್ಗೆ ಡೀಟೇಲ್ಸ್ ತುಂಬಾ ಇದೆ. ಇನ್ನರ್ ಲೈನ್ ಹೇಗೆ ಮತ್ತು ಬೇರೆ ಬೇರೆ ಲಿಂಕ್ ಹೇಗೆ ಬರಬೇಕು ಎಂಬ ಬಗ್ಗೆ ಡಿಟೇಲ್ಸ್ ಇದೆ. Upto the end of March 1990 we have incurred an expenditure of Rs. 19.11 crores. During the current part a provision of Rs. 1 crores has been made in the budget estimates also. Rs. 1.8 crore expenditure has been incurred upto the end of October 1990. To an extent of Rs. 3 crore towards work on the project, it is pending with Finance Department. ನಾನು ಕ್ಲಿಯರೆನ್ಸ್ ಕೊಟ್ಟರೆ ಮತ್ತೊಂದು 8 ಕೋಟಿ ರೂಪಾಯಿ ಅದಕ್ಕೆ ಸಿಗತಕ್ಕಂತಹ ಸಂದರ್ಭ ಇದೆ. ಕೆಲಸವನ್ನು ಯಾವ ಯಾವ ಟೈಪ್ ಏನೇನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಇಲ್ಲಿ ಡೀಟೇಲ್ಸ್ ಇದೆ. 1–2–3–4 ಹೀಗೆ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಈ ಪ್ರಶ್ನೆ ಬೇರೆ. ಎರಡೂ ಪ್ರಾಜೆಕ್ಟ್‌ಗಳಿಗೆ ಮೂಲ ಅಂದಾಜು ಎಷ್ಟು ? ಮರು ಪರಿಶೀಲನೆ ಮಾಡಿರತಕ್ಕದ್ದು ಎಷ್ಟು ? ಮೂಲ ಅಂದಾಜು 67 ಕೋಟಿ ರೂಪಾಯಿ ಅಂದಿರಿ. ಖರ್ಚು ಮಾಡಿರುವುದು ಎಷ್ಟು ? ಯಾವಾಗ ಮುಗಿಸುತ್ತೀರಿ ? ಇದಕ್ಕೆ ಏನಾದರೂ ಒಂದು ಗುರಿ ಇರಬೇಕು.

ಶ್ರೀ ಎಸ್. ಬಂಗಾರಪ್ಪ :– ಮೂಲ ಅಂದಾಜನ್ನು ನಾನು ಈಗಾಗಲೇ ಹೇಳಿದ್ದೇನೆ. Modernisation of Visweswarayya Canal ನಾನು ಅದನ್ನು ಹೇಳಿದ್ದೇನೆ. Rs. 67 crores estimated cost ಈಗ ಇರತಕ್ಕದ್ದು. ವರುಣಾ ಕೆನಾಲ್ ಏನಿದೆಯಲ್ಲ "shall be called as right bank canal and shall irrigate 80,000 acres for semidry crops" ಒರಿಜನಲ್ ಎಸ್ಟಿಮೇಟ್ ಕಾಸ್ಟ್ ಕೇಳುತ್ತಿದ್ದೀರಿ, ಸ್ವಲ್ಪ ಅದನ್ನು ನಾನು ನೋಡುತ್ತೇನೆ. ಅದಕ್ಕೆ ತಕ್ಷಣ ಉತ್ತರವಿಲ್ಲ. The details are not available immediately I will explain it afterwards...

ಶ್ರೀ ಡಿ. ಬಿ. ಚಂದ್ರೇಗೌಡ :– ಇದು ಬಹಳ ಮುಖ್ಯವಾದ ಪ್ರಶ್ನೆ.

(INTERRUPTIONS)

ಅಧ್ಯಕ್ಷರು :– ನಾನು ನಿಮ್ಮ ಸಹಾಯಕ್ಕೆ ಬರುತ್ತಿದ್ದೇನೆ. ಒಂದು ನಿಮಿಷ, ಶ್ರೀಮತಿ ದಮಯಂತಿ ಬೋರೇಗೌಡ ಅವರೇ ತಮ್ಮದು ಇನ್ನೊಂದು ಪ್ರಶ್ನೆಯಿದೆ, ವರುಣಾ ನಾಲೆಗೆ ಸಂಬಂಧಪಟ್ಟಿದ್ದುದು, ತಾವು ಅದನ್ನು ಕೇಳಿಬಿಡಿ ಅದಕ್ಕೆ ಉತ್ತರ ಕೊಡುತ್ತಾರೆ. ಆಮೇಲೆ ತಾವು ಪ್ರಶ್ನೆಗಳನ್ನು ಕೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಮುಖ್ಯವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು :– ನಾನು ನಿಮ್ಮನ್ನು ಕರೆಯುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ಸನ್ನ ಮುಖ್ಯವಾದ ಪ್ರಶ್ನೆ ಏನೆಂದರೆ, ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟಿದಾಗ ಸರ್ ಎಂ. ವಿಶ್ವೇಶ್ವರಯ್ಯನವರೇ 80 ಅಡಿ ಎತ್ತರದಲ್ಲಿ ಒಂದು ಗೇಟನ್ನು ಇಟ್ಟಿದ್ದಾರೆ. ಅದು 1100 ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗತಕ್ಕ ಬಾಗಿಲು ಇದೆ. ಅದನ್ನು ಬಿಟ್ಟು ಮತ್ತೊಂದು ಬಾಗಿಲನ್ನು ಮೇಲ್ಗಡೆ ಡ್ಯಾಮಿಗೆ ಅಪಾಯ ಬರತಕ್ಕ ರೀತಿಯಲ್ಲಿ ಹೊಡೆಯತಕ್ಕ ಪ್ರಯತ್ನ ಈಗ ನಡೆದಿದೆ. ಆ ಬಾಗಿಲನ್ನೇ ಬಳಸಿಕೊಂಡು ವರುಣಾ ನಾಲೆಗೆ ಸಾಕಷ್ಟು ನೀರನ್ನು ಕೊಡುವುದಕ್ಕೆ ಸಾಧ್ಯ-

ವಿಲ್ಲವೇ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. because it is in the original dam done by no less a person than Sri M. Visweswarayya. He had the vision of keeping it specially with reference to this. ಅದು ಸಾಧ್ಯವಿದೆಯೇ ಎಂಬುದನ್ನು ನೋಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. ಇದು ವರುಣಾ ನಾಲೆಗೆ ಸಂಬಂಧಪಟ್ಟಿದ್ದುದು. ಮಾದ್ರನೈಸೇಷನ್ ಆಫ್ ಸರ್ ಎಂ. ವಿಶ್ವೇಶ್ವರಯ್ಯ ಕೆನಾಲ್ ಅದರ ಪ್ರಶ್ನೆಯಿಲ್ಲ ವರುಣಾ ಕೆನಾಲ್ ವಿಚಾರದಲ್ಲಿ ಇದು ಮೊದಲೇ ತೀರ್ಮಾನವಾಗಬೇಕಾಗಿದ್ದರೂ without affecting the Visweswarayya canal, ಫ್ಲೊ ಆಫ್ ವಾಟರ್ ಮತ್ತೊಂದು ಆಗದ ಹಾಗೆ ನೋಡಿ ಕೊಳ್ಳಬೇಕು. ಅದರ ವರ್ಕ್ಸ್ ಕೂಡ ಶುರುವಾಗಿದೆ. ಯಾವ ಪ್ರಮಾಣದಲ್ಲಿರ ಬೇಕೆಂಬುದನ್ನು ಸ್ಪೆಸಿಫೈ ಮಾಡಿ ಇಟ್ಟಿದ್ದಾರೆ. ಬ್ಲಾಸ್ಟಿಂಗ್ ವಿಚಾರದಲ್ಲಿ ತಾವು ಪ್ರಶ್ನೆ ಕೇಳಿರತಕ್ಕದ್ದು. ಈ ವಿಚಾರದಲ್ಲಿ ನಾನು ವಿಧಾನಪರಿಷತ್ತಿನಲ್ಲಿ ಉತ್ತರ ಕೊಟ್ಟಿದ್ದೇನೆ. ಅದೇ ಉತ್ತರವನ್ನು ಇಲ್ಲಿಯೂ ಕೊಡುತ್ತಿದೇನೆ. ಎಕ್ಸ್‌ಪರ್ಟ್ ಕಮಿಟಿಯವರು ನೋಡಿ ಸೇಫ್ ಡಿವೈಸಸ್ ಮಾಡಿ ಇದನ್ನು ಹೇಗೆ ಉಪಯೋಗ ಮಾಡಬೇಕು ಹೇಗೆ ಮಾಡಬೇಕೆಂಬುದರ ಬಗ್ಗೆ ಗೈಡ್‌ಲೈನ್ಸ್ ಕೂಡ ಕೊಟ್ಟಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನನ್ನ ಪ್ರಶ್ನೆ ಬೇರೆ. ಈಗಿರತಕ್ಕ ಆಣೆಕಟ್ಟಿನ 80 ಅಡಿ ಎತ್ತರದಲ್ಲಿ ಒಂದು ಗೇಟ್ ಇದೆ. ಆ ಗೇಟ್‌ಗೆ 1100 ಕ್ಯೂಸೆಕ್ಸ್ ನೀರು ತೆಗೆದುಕೊಂಡು ಹೋಗತಕ್ಕ ಕ್ಯಾಪಾಸಿಟಿ ಇದೆ. ಮತ್ತೊಂದು ಗೇಟಿನ ಅವಶ್ಯಕತೆಯಿಲ್ಲ. ಆ ಗೇಟನ್ನೇ ಉಪಯೋಗಿಸಿಕೊಂಡು ವರುಣಾ ನಾಲೆಗೆ ನೀರು ಕೊಡುವುದಕ್ಕೆ ಸಾಧ್ಯವಿದೆಯೇ ? ತಜ್ಞರ ಅಭಿಪ್ರಾಯ ಅನಾವಶ್ಯಕ. ಆಗಲೇ ಅವರು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಇದನ್ನು ಪರಿಶೀಲನೆಮಾಡಿ ನೀರನ್ನು ಕೊಡುತ್ತೀರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ :– ತಾವು ಕೇಳತಕ್ಕದ್ದು ವರುಣಾ ಕೆನಾಲ್ ಅನಾವಶ್ಯಕವೆಂದು ಹೇಳುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ :– ಆಣೆಕಟ್ಟಿನ 80 ಅಡಿ ಎತ್ತರದಲ್ಲಿ ಒಂದು ಗೇಟನ್ನು ಸರ್ ಎಂ. ವಿಶ್ವೇಶ್ವರಯ್ಯನವರು ಇಟ್ಟಿದ್ದಾರೆ. ಮತ್ತೊಂದು ಗೇಟು ಅನಾವಶ್ಯಕ. ಅದನ್ನೇ ಬಳಸಿಕೊಂಡು ವರುಣಾ ನಾಲೆಯಲ್ಲಿ ನೀರನ್ನು ತೆಗೆದುಕೊಂಡು ಹೋಗಬಹುದೆನ್ನುವುದು ತಜ್ಞರ ಸಲಹೆಯಿದೆ. ಅದನ್ನು ಪರಿಶೀಲನೆ ಮಾಡುತ್ತೀರಾ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ :– ಅದನ್ನು ಪರಿಶೀಲನೆ ಮಾಡಿ ಆನೇನೆಂಬುದನ್ನು ನಾನು ನೋಡುತ್ತೇನೆ

ವಿಷಯ :– ಮಾಗಡಿ–ರಾಮನಗರ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುವ ವಿಸ್ತೀರ್ಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 215 (1112)

ಶ್ರೀಯುತರಾದ ಸಿ. ಎಂ. ಲಿಂಗಪ್ಪ (ರಾಮನಗರ) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾಗಡಿ ಮತ್ತು ರಾಮನಗರ ತಾಲ್ಲೂಕುಗಳಲ್ಲಿ ಗ್ರೈನೇಜ್ ದೊರೆಯುವ ಜಮೀನಿನ ವಿಸ್ತೀರ್ಣ ವೆಷ್ಟು ?

ಆ) ಇದರಲ್ಲಿ ಎಷ್ಟು ರೇಷ್ಮೆ ಬೆಳೆಯನ್ನು ಬೆಳೆಯಲಾಗುವುದು ?

ಇ) ರೇಷ್ಮೆ ಬೆಳೆಗಾರರಿಗೆ ಶೇಕಡ 15 ರಷ್ಟು ಬೋನಸ್ ಕೊಡುತ್ತಿರುವುದು ನಿಜವೇ ?

ಈ) ಹಾಗಿದ್ದಲ್ಲಿ ಅದನ್ನು ಶೇಕಡ 23 ರಷ್ಟು ಬೋನಸ್‌ಗಳಿಗೆ ಏರಿಸಲು ಸಾಧ್ಯವಿಲ್ಲವೆ ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :–

ಅ) ಮಾಗಡಿ ತಾಲ್ಲೂಕಿನಲ್ಲಿ 4 ಹಾಗೂ ರಾಮನಗರ ತಾಲ್ಲೂಕಿನಲ್ಲಿ 2 ಬಿತ್ತನೆ ಕೋಠಿಗಳು (ಗ್ರೈನೇಜ್) ಇವೆ.

ಹಿಪ್ಪನೇರಳೆ ವ್ಯವಸಾಯವನ್ನು ಕೈಗೊಂಡಿರುವ ವಿಸ್ತೀರ್ಣ ಈ ಕೆಳಕಂಡಂತಿದೆ.